<u>ಅಸಲು ದಾವಾಃ</u>- 284/2013 ಡಿ.ಡಬ್ಲ್ಯೂಃ- 3

ದಿನಾಂಕಃ 13.10.2025 ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಭೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲುಃ- 1(ಎ) ಯಿಂದ (ಡಿ) ಪ್ರತಿವಾದಿಗಳ ಪರ ಶ್ರೀ.ಯುಕೆ ವಕೀಲರಿಂದಃ-</u>

ನಾನು ಕೆಲಸ ಮಾಡಿದ ಸರ್ಕಾರಿ ಕಚೇರಿಗಳಲ್ಲಿ ನನಗೆ ಒಳ್ಳೆಯ ಹೆಸರು ಮತ್ತು ಪ್ರಭಾವ ಇದೆ ಎಂದರೆ ಸರಿ. ನನ್ನ ಅಧಿಕಾರದ ಪ್ರಭಾವ ಬೆಳೆಸಿ ನ್ಯಾಯಾಲಯಕ್ಕೆ ಹಾಜರುಪಡಿಸಿರುವ ದಾಖಲೆಗಳನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ವಾದಿ ನನಗೆ ಏನಾಗಬೇಕು ಎಂದರೆ ನನ್ನ ತಮ್ಮ. ಪ್ರತಿವಾದಿ 1(ಎ) ಯಿಂದ (ಡಿ) ರವರು ನನಗೆ ಏನಾಗಬೇಕು ಎಂದರೆ ಸಾಕ್ಷಿಯು ನನ್ನ ಅಣ್ಣ ಮಲ್ಲಪ್ಪನ ಹೆಂಡತಿ ಮತ್ತು ಮಕ್ಕಳು ಎಂದು ನುಡಿ ಯುತ್ತಾರೆ. ನನ್ನ ತಂದೆಗೆ ಎಷ್ಟು ಜನ ಮಕ್ಕಳು ಎಂದರೆ ಸಾಕ್ಷಿಯು 7 ಜನ ಅವರೆಂದರೆ ಪರಮೇಶ್ವರಪ್ಪ, 1 ನೇ ಪ್ರತಿವಾದಿ, ನಾನು, ಲೋಕೇಶ್ವರಪ್ಪ, ವಾದಿ, ಬಸಮ್ಮ ಮತ್ತು ಜಯಮ್ಮ ಎಂದು ನುಡಿಯುತ್ತಾರೆ. ನನ್ನ ತಂದೆಯ ಹೆಸರು ಎಂದರೆ ಶಿವಪ್ಪ. ನನ್ನ ತಂದೆಗೆ ಎಷ್ಟು ಜನ ಅಣ್ಣ ತಮ್ಮಂದಿರು ಎಂದರೆ 4 ಜನ ಅವರೆಂದರೆ ಹನುಮಂತಪ್ಪ, ಲಕ್ಕಮ್ಮ, ಜಿ.ಎನ್ ವೀರಪ್ಪ ಎಂದು ನುಡಿಯುತ್ತಾರೆ. ನಮ್ಮ ತಂದೆಯ ತಂದೆಯ ಹೆಸರು ರುದ್ರಪ್ಪ ಎಂದರೆ ಸರಿ. ನನ್ನ ತಂದೆ, ಹನುಮಂತಪ್ಪ, ಲಕ್ಕಮ್ಮ, ಜಿ.ಎನ್ ವೀರಪ್ಪ ಇವರು ತೀರಿಕೊಂಡಿರುತ್ತಾರೆ ಎಂದರೆ ಸರಿ. ದಾವಾ ಹಾಕುವ ಸಮಯದಲ್ಲಿ ವೀರಪ್ಪ ಬದುಕಿದ್ದರು ಎಂದರೆ ಸರಿ. ನನ್ನ ತಂದೆಯ ಸಹೋದರರ ನಡುವೆ ಒಟ್ಟು ಕುಟುಂಬದ ಆಸ್ತಿಗಳ ವಿಭಾಗ ಆಗಿಲ್ಲ ಎಂದರೆ ಸಾಕ್ಷಿಯು 1946 ರಲ್ಲಿ ವಿಭಾಗ ಆಗಿರುತ್ತದೆ ಎಂದು ನುಡಿಯುತ್ತಾರೆ. ಯಾವ ರೀತಿ ವಿಭಾಗ ಆಗಿರುತ್ತದೆ ಎಂದರೆ ಸಾಕ್ಷಿಯು ಬರವಣಿಗೆಯ ಮೂಲಕ ವಿಭಾಗ ಆಗಿರುತ್ತದೆ ಎಂದು ನುಡಿಯುತ್ತಾರೆ.

ಸದರಿ ವಿಭಾಗದ ಪ್ರಕಾರ ಜಮೀನುಗಳ ಖಾತೆ ಬದಲಾವಣೆ ಆಗಿದೆ ಎಂದರೆ ಸಾಕ್ಷಿಯು 1 ಸರ್ವೆ ನಂಬರ್ ಮತ್ತು 1 ಖಾನೇಷು ಮಾರಿ ನಂ.46/1 ಮತ್ತು 46/2 ಬದಲಾವಣೆ ಆಗಿರುತ್ತದೆ ಎಂದು ನುಡಿಯುತ್ತಾರೆ. ನಮ್ಮ ಕುಟುಂಬದಲ್ಲಿ 1 ಸಲ ವಿಭಾಗ ಆದ ನಂತರ ಮತ್ತೊಮ್ಮೆ ವಿಭಾಗ ಮಾಡಲು

ಆಗುವುದಿಲ್ಲ ಎಂದರೆ ಇರಬಹುದು ಎಂದು ನುಡಿಯುತ್ತಾರೆ. ನಿಪಿ 2 ವಿಭಾಗ ಪತ್ರದ ಪ್ರಕಾರ ನನ್ನ ತಂದೆ ಶಿವಪ್ಪ, ಹನುಮಂತಪ್ಪರವರ ಮಗ ಈಶ್ವರಪ್ಪ ಮತ್ತು ನಾನು ವಿಭಾಗ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ನಿಪಿ 2 ವಿಭಾಗ ಪತ್ರದಲ್ಲಿ ನನ್ನ ಚಿಕ್ಕಪ್ಪ ವೀರಪ್ಪರವರು ಪಾರ್ಟಿ ಇಲ್ಲ ಎಂದರೆ ಸರಿ ಮುಂದುವರೆದು ಸಾಕ್ಷಿಯು ಅವರಿಗೆ ಹಕ್ಕು ಇರಲಿಲ್ಲ ಎಂದು ನುಡಿಯುತ್ತಾರೆ. ವೀರಪ್ಪರವರಿಗೆ ಹಕ್ಕು ಇದ್ದರೂ ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ನಮಗೆ ಜಂಟಿ ಇದ್ದಿದ್ದರಿಂದ ವಿಭಾಗ ಮಾಡಿಕೊಂಡಿರುತ್ತೇವೆ ಎಂದು ನಿಪಿ 2 ವಿಭಾಗ ಪತ್ರದಲ್ಲಿ ನಮೂದಿಸಿಲ್ಲ ಎಂದರೆ ಸರಿ. ನನ್ನ ತಂದೆ ಮತ್ತು ಅವರ ಸಹೋದರರು ಜೀವಂತವಿದ್ದ ಕಾಲದಲ್ಲಿ ಅವರ ಒಟ್ಟು ಕುಟುಂಬದ ಆಸ್ತಿಗಳಿಗೆ ವಿಭಾಗ ಮಾಡಿಕೊಳ್ಳುವ ಸಂದರ್ಭದಲ್ಲಿ ನಾನು ಪಕ್ಷಗಾರನಾಗುವ ಅವಶ್ಯಕತೆ ಇರಲಿಲ್ಲ ಎಂದರೆ ಸಾಕ್ಷಿಯು 1982 ರಲ್ಲಿ ನನ್ನ ಚಿಕ್ಕಪ್ಪ ವೀರಪ್ಪರವರಿಂದ ಅವರ ಹಿಸ್ಸೆಯ ಸರ್ವೆ ನಂ.112/1 ರ 13 ಗುಂಟೆ ಜಮೀನನ್ನು ಖರೀದಿಸಿದ್ದರಿಂದ ವಿಭಾಗ ಪತ್ರದಲ್ಲಿ ಸೇರಿಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ 2 ವಿಭಾಗ ಪತ್ರದ ಸಮಯದಲ್ಲಿ ಸರ್ವೆ ನಂ.112/1 ರ 13 ಗುಂಟೆ ಜಮೀನು ಯಾರ ಹೆಸರಿಗೆ ಇತ್ತು ಎಂದರೆ ಸಾಕ್ಷಿ ನನ್ನ ಹೆಸರಿಗೆ ಇತ್ತು ಎಂದು ನುಡಿಯುತ್ತಾರೆ.

1982 ರಲ್ಲಿ ನನ್ನ ಚಿಕ್ಕಪ್ಪ ವೀರಪ್ಪರವರಿಂದ ಸರ್ವೆ ನಂ.112/1 ರ ಜಮೀನನ್ನು ಖರೀದಿ ಮಾಡಿದ್ದರಿಂದ ವಿಭಾಗ ಪತ್ರದಲ್ಲಿ ಪಕ್ಷಗಾರನಾಗಿರುತ್ತೇನೆ ಎಂದು ನಿಪಿ 2 ರ ವಿಭಾಗ ಪತ್ರದಲ್ಲಿ ಒಕ್ಕಣಿಕೆ ಇರುವುದಿಲ್ಲ ಎಂದರೆ ಸರಿ. ಒಂದು ವೇಳೆ ಸದರಿ ಸರ್ವೆ ನಂ.112/1 ರ ಜಮೀನನ್ನು ನಾನು ಖರೀದಿಸಿದ್ದೆ ಆದರೆ ಸದರಿ ಜಮೀನನ್ನು ನಿಪಿ 2 ವಿಭಾಗ ಪತ್ರದಲ್ಲಿ ಸೇರಿಸುವ ಅವಶ್ಯಕತೆ ಇರಲಿಲ್ಲ ಎಂದರೆ ಸಾಕ್ಷಿ ಯು ನಾನು ಖರೀದಿಸಿದ ನಂತರ ನನ್ನ ಹೆಸರಿಗೆ ಬಂದಂತಹ ಖಾತೆಯನ್ನು ಪುನಃ 1989 ರಲ್ಲಿ ಕುಟುಂಬದ ಸದಸ್ಯರ ಹೆಸರಿಗೆ ಜಂಟಿ ಖಾತೆ ಆಗಿದ್ದರಿಂದ ನಿಪಿ 2 ವಿಭಾಗ ಪತ್ರದಲ್ಲಿ ಸದರಿ ಆಸ್ತಿಯನ್ನು ಸೇರಿಸಿರುತ್ತೇವೆ ಎಂದು ನುಡಿಯುತ್ತಾರೆ. ನಿಪಿ 2 ವಿಭಾಗ ಪತ್ರಕ್ಕಿಂತ ಪೂರ್ವದಲ್ಲಿ ನಮ್ಮ ಕುಟುಂಬದಲ್ಲಿ ಯಾವುದೇ ವಿಭಾಗ ಆಗಿಲ್ಲ ಎಂದರೆ ಸಾಕ್ಷಿಯು 1983 ರಲ್ಲಿ ವಿಭಾಗ ಆಗಿರುತ್ತದೆ ಎಂದು ನುಡಿಯುತ್ತಾರೆ.

ಒಂದು ವೇಳೆ 1983 ರಲ್ಲಿ ನಾನು ಹೇಳಿದ ಹಾಗೇ ವಿಭಾಗ ಆಗಿದ್ದರೆ ಪುನಃ ನಿಪಿ 2 ರಂತೆ ವಿಭಾಗ ಮಾಡಿಕೊಳ್ಳುವ ಅವಶ್ಯಕತೆ ಬರುತ್ತಿರಲಿಲ್ಲ ಎಂದರೆ ಸಾಕ್ಷಿಯು 1989 ರಲ್ಲಿ ಕಂದಾಯ ಅಧಿಕಾರಿಗಳು ನಾನು ಖರೀದಿಸಿದ ಆಸ್ತಿಗೆ ನನ್ನ, ನನ್ನ ತಂದೆಯ ಹೆಸರು ಮತ್ತು ನನ್ನ ದೊಡ್ಡಪ್ಪನ ಮಗ ಈಶ್ವರಪ್ಪ ರವರ ಹೆಸರಿಗೆ ಜಂಟಿ ಖಾತೆ ಮಾಡಿದ್ದರಿಂದ ನಿಪಿ 2 ರಂತೆ ವಿಭಾಗ ಪತ್ರ ಮಾಡಿಕೊಂಡಿರುತ್ತೇವೆ ಮತ್ತು ನನ್ನ ಸಹೋದರ ಪರಮೇಶ್ವರಪ್ಪ ರವರು ಸಹ ಸಾಕ್ಷಿ ಸಹಿ ಹಾಕಿರುತ್ತಾರೆ ಎಂದು ನುಡಿಯುತ್ತಾರೆ.

ನಿಪಿ 2 ವಿಭಾಗ ಪತ್ರಕ್ಕೆ ವಾದಿ ವಿರೂಪಾಕ್ಷಪ್ಪ , ಪ್ರತಿವಾದಿ 1(ಎ) ಯಿಂದ (ಡಿ) ಮತ್ತು ನನ್ನ ಸಹೋದರಿಯವರು ಸಹಿ ಹಾಕಿದ್ದಾರಾ ಎಂದರೆ ಸಾಕ್ಷಿಯು ಅವರು ಸಹಿ ಹಾಕುವ ಅವಶ್ಯಕತೆ ಇರಲಿಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಯು ಒಟ್ಟು ಕುಟುಂಬದ ಆಸ್ತಿಯಾಗಿದ್ದರಿಂದ ಮೇಲೆ ಹೇಳಿದ ವ್ಯಕ್ತಿಗಳು ಸಹ ನಿಪಿ 2 ಕ್ಕೆ ಅವಶ್ಯಕ ಪಕ್ಷಗಾರರಾಗಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆ ಮತ್ತು ಅವರ ಸಹೋದರರ ನಡುವೆ ವಿಭಾಗ ಆಗಿರುತ್ತದೆ ಎಂದು ಹೇಳಿದ್ದು ಅದರಂತೆ ಆಸ್ತಿಗಳ ಖಾತೆ ಬದಲಾವಣೆ ಆಗಿದೆ ಎಂದರೆ ಸಾಕ್ಷಿಯು ಆಗಿದೆ ಎಂದು ನುಡಿಯುತ್ತಾರೆ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶವನ್ನು ಕೋರಿದ್ದು, ಪಾಟೀ ಸವಾಲನ್ನು ಮುಂದೂಡಲಾಯಿತು.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ